ರಾತೋರಾತ್ರಿ ಜನ್ಮ ತಳೆಯುತ್ತವೆ. ವರ್ಷವಿಡೀ ಫ್ಯಾಷನ್ ಶೋಗಳು ಜಗತ್ತಿನ ವಿವಿಧ ನಗರಗಳಲ್ಲಿ ನಡೆಯುತ್ತವೆ. ಬೃಹತ್ ಮಾರುಕಟ್ಟೆ ಮೌಲ್ಯ ಹೊಂದಿರುವ ಕಂಪನಿಗಳು ಆಯೋಜಿಸುವ ಫ್ಯಾಷನ್ ಸ್ಪರ್ಧೆಗಳ ರ್‍ಯಾಂಪ್‌ನ ಮೇಲೆ ವಿಚಿತ್ರ ವಿನೂತನ ಉಡುಪು ಧರಿಸಿ ಬೆಡುಗು ಬಿನ್ನಾಣದ ಮೇಳದಲ್ಲಿ ಸೊಂಟ ಬಳುಕಿಸಿ, ಎದೆ ತೆರೆದು, ಉಬ್ಬಿಸಿ ಹೆಜ್ಜೆ ಹಾಕಿ ಇಂದ್ರನ ಅಮರಾವತಿಯೇ ನಾಚುವಂತೆ ವೈಭವ ಸೃಷ್ಟಿಸುವ ಪುರುಷ–ಮಹಿಳಾ ರೂಪದರ್ಶಿಗಳು ಹೊಸ ಫ್ಯಾಷನ್‌ಗೆ ಕೋಟ್ಯಂತರ ರೂಪಾಯಿ ಮಾರುಕಟ್ಟೆ ಮೌಲ್ಯಸಿಗುವಂತೆ ಮಾಡುತ್ತಾರೆ. ಸಂಜೆಯ ಮೋಜಿನಕೂಟ ಮುಗಿದು ಬೆಳಗಾಗುವಷ್ಟರಲ್ಲಿ ಅವರು ಧರಿಸಿದ ಬಟ್ಟೆಯ ಬ್ರ್ಯಾಂಡ್ ಮೌಲ್ಯ ಹಲವು ಕೋಟಿಗಳ ವೃದ್ಧಿ ಕಂಡಿರುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸಂಚಲನ ಮೂಡುತ್ತದೆ. ದೊಡ್ಡಮಟ್ಟದ ಒಪ್ಪಂದಗಳಾಗುತ್ತವೆ. ಕೈತುಂಬಾ ಹಣ ಪಡೆಯುವ ಮಾಡೆಲ್‌ಗಳು ರಾತ್ರಿ ಬೆಳಗಾಗುವುದರೊಳಗೆ ಗ್ಲ್ಯಾಮರ್ ಲೋಕದ ಹೊಸ ತಾರೆಗಳಾಗಿ ಉದಯಿಸುತ್ತಾರೆ. ಕೆಲವರು ಸಿನಿಮಾ ಲೋಕಕ್ಕೆ ಬಂದು ಮತ್ತಷ್ಟೂ ಹಣ, ಖ್ಯಾತಿ ಸಂಪಾದಿಸುತ್ತಾರೆ.

ಯಾವುದೋ ಹಳ್ಳಿಯ ಅಂಗಡಿ ಕಟ್ಟೆಯ ಟೈಲರ್‌ನಿಂದ ಹಿಡಿದು ಲಕ್ಷಾಂತರ ರೂಪಾಯಿ ಬೆಲೆಯ ಲೆಹೆಂಗಾ ತಯಾರಿಸುವ ಮನೀಶ್ ಮಲ್ಹೋತ್ರಾನಂಥವರಿಗೆ ಜನ ಧರಿಸುವ ಉಡುಪೇ ಊಟ. ಇವರಂತೆಯೇ ದಿನದ ಮೂರುಮೂರು ಶಿಫ್ಟ್‌ಗಳಲ್ಲಿ ದುಡಿಯುವ ಬಟ್ಟೆ ಕಾರ್ಖಾನೆಯ ಕಾರ್ಮಿಕರಿಗೆ, ಹೊಲಿದು ಉಡುಪು ಸಿದ್ಧಪಡಿಸುವ ಗಾರ್ಮೆಂಟ್ಸ್ ಉದ್ಯಮದ ತಾಯಂದಿರಿಗೆ, ಬಟ್ಟೆಗೆ ಬಣ್ಣ ಹಾಕುವ ಡೈ ಇಂಡಸ್ಟ್ರಿಯವರಿಗೆ, ಉಡುಪು ಹೊಲಿಯಲಿಕ್ಕೆ ಬೇಕಾದ ದಾರ, ಯಂತ್ರಗಳನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಸಾಗಿಸುವ ಸಾಗಣೆಗಾರರಿಗೆ, ಹೀಗೆ ಕೋಟ್ಯಂತರ ಜನರಿಗೆ ಅನ್ನ ಹಾಕುವುದು ನಾವು ತೊಟ್ಟು ಮೆರೆಯುವ ವಸ್ತ್ರವೇ. ವಿಶ್ವಮಾರುಕಟ್ಟೆಯಲ್ಲಿ ತನ್ನ ದೇಶದ ಉತ್ಪನ್ನಮಾರಿ ವಿದೇಶಿ ವಿನಿಮಯ ಗಳಿಸುವ ಗುರಿ ಹೊಂದಿರುವ ದೇಶಗಳೆಲ್ಲ ವರ್ಷದಿಂದ ವರ್ಷಕ್ಕೆ ತಮ್ಮ ಉತ್ಪನ್ನ, ಖರ್ಚು, ಆದಾಯಗಳನ್ನು ಏರಿಸಿಕೊಳ್ಳುತ್ತಲೇ ನಡೆದಿವೆ.

## ವಿಶ್ವ ವಸ್ತ್ರೋದ್ಯಮದ ವಿರಾಟ್‌ರೂಪ

ವಾರ್ಷಿಕ ಸುಮಾರು 800 ಶತಕೋಟಿ ಡಾಲರ್ ವ್ಯವಹಾರ ಹೊಂದಿರುವ ಜವಳಿ ಉದ್ಯಮ ವಿಶ್ವದ ಹಿರಿಕಿರಿಯ ರಾಷ್ಟ್ರಗಳೆನ್ನದೆ ಜಗತ್ತಿನ ಮೂಲೆ ಮೂಲೆಯಲ್ಲಿ ವ್ಯಾಪಿಸಿದೆ. ಕೋಟ್ಯಂತರ ಜನ ಕಾರ್ಮಿಕರ ತುತ್ತಿನ ಚೀಲ ತುಂಬುವ ಉದ್ಯಮವಾಗಿರುವ ಜವಳಿ ಕ್ಷೇತ್ರ ಸುಮಾರು 250 ಶತಕೋಟಿ ಡಾಲರ್ ವ್ಯವಹಾರವನ್ನು ಭಾರತದಲ್ಲೇ ಹೊಂದಿದ್ದು, ದೇಶದ ಜಿಡಿಪಿಗೆ ಶೇ. 2ರ ಕೊಡುಗೆ ನೀಡುತ್ತಿರುವ ವಸ್ತ್ರೋದ್ಯಮ ನಾಲ್ಕೂವರೆ ಕೋಟಿ ಜನರಿಗೆ ಉದ್ಯೋಗ ಕಲ್ಪಿಸಿದೆ. ಕಳೆದ ವರ್ಷದ ರಫ್ತು ವ್ಯವಹಾರದ ಒಟ್ಟು ಗಳಿಕೆಯಲ್ಲಿ ಶೇ. 16ರಷ್ಟು ಪಾಲು ವಸ್ತ್ರೋದ್ಯಮದ್ದೇ ಆಗಿದೆ. ಮೂರೂವರೆ ಶತಕೋಟಿ ಡಾಲರ್‌ಗಳ ವಿದೇಶಿ ನೇರ ಬಂಡವಾಳವೂ ಭಾರತಕ್ಕೆ ಕಳೆದ ದಶಕದಲ್ಲಿ ದೊರೆತಿದೆ. 2022ರ ವೇಳೆಗೆ 35 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸುವ ಉದ್ದೇಶ ಹೊಂದಿರುವ ಕೇಂದ್ರ ಸರ್ಕಾರ ಅದಕ್ಕಾಗಿ 95 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹೊಂದಿಸುವ ಯೋಚನೆಯಲ್ಲಿದೆ. ಜವಳಿ ಕ್ಷೇತ್ರದಲ್ಲಿ ಕೆಲಸ ಮಾಡುವವರ ಕೌಶಲ್ಯವೃದ್ಧಿಗಾಗಿ 1500 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿ ಆಯವ್ಯಯದಲ್ಲಿ ತೆಗೆದಿರಿಸಲಾಗಿದೆ. ಭಾರತದಲ್ಲಿ ತಯಾರಾದ ವಸ್ತ್ರೋತ್ಪನ್ನಗಳಿಗೆ ಅಗ್ರಸ್ಥಾನ ನೀಡಿರುವ 'ಮೇಕ್ ಇನ್ ಇಂಡಿಯಾ' ಯೋಜನೆಯಡಿ ವಸ್ತ್ರಗಳ



### ಸೆಕೆಂಡ್ ಹ್ಯಾಂಡ್ ಬಟ್ಟೆಯ ಖಜಾನೆ

ಹರಿಯಾಣದ ಪಾಣಿಪತ್ ಮೂರು ಬೃಹತ್ ಯುದ್ಧಗಳನ್ನು ಕಂಡ ನೆಲ. ದೆಹಲಿಯ ಸುಲ್ತಾನರು, ಮೊಘಲರು ಮತ್ತು ಮರಾಠರ ನಡುವೆ ನಡೆದ ಯುದ್ಧಗಳಲ್ಲಿ ಸಾವಿರಾರು ಸೈನಿಕರು ಪ್ರಾಣ ಕಳೆದುಕೊಂಡಿದ್ದರು. ಅದೇ ಪಾಣಿಪತ್ ಈಗ ವಿಶ್ವದ ಎಲ್ಲೆಡೆಯಿಂದ ಭಾರತಕ್ಕೆ ಆಮದಾಗುವ ಸೆಕೆಂಡ್ ಹ್ಯಾಂಡ್ ಬಟ್ಟೆಗಳ ಬೃಹತ್ ಮಾರುಕಟ್ಟೆ. ಅಮೆರಿಕ, ಕೆನಡ, ಜಪಾನ್, ಕೊರಿಯ, ಯೂರೋಪ್‌ಗಳಿಂದ ಪಾಣಿಪತ್‌ಗೆ ಬರುವ ಕೋಟ್ಯಂತರ ಬಟ್ಟೆಗಳು ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಮತ್ತೆ ಆಫ್ರಿಕಾ ಮತ್ತು ಏಷ್ಯಾದ ಮಾರುಕಟ್ಟೆಗಳನ್ನು ಪ್ರವೇಶಿಸುತ್ತವೆ. ಇಲ್ಲಿ ರೀ ಸೈಕಲ್ ಆಗಿ ಮಾರುಕಟ್ಟೆಗೆ ಬರುವ ಉಣ್ಣೆಯ ಬ್ಲಾಂಕೆಟ್‌ಗಳಿಗೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಭಾರೀ ಬೇಡಿಕೆ ಇದೆ. ವಿಶ್ವದ ಎಲ್ಲ ಭಾಗಗಳ ಬಳಸಿ ತ್ಯಜಿಸಿದ ಬಟ್ಟೆಗಳ ನವೀಕರಣ ಕೇಂದ್ರವೆನಿಸಿರುವ ಪಾಣಿಪತ್ ನಗರವನ್ನು 'ಕ್ಯಾಸ್ಟ್ ಕ್ಯಾಪಿಟಲ್ ಆಫ್ ದ ವರ್ಲ್ಡ್' ಎನ್ನುತ್ತಾರೆ.